ಉ) ಈ ಬಗ್ಗೆ ರಾಜ್ಯದಾದ್ಯಂತ ಅನ್ವಯವಾಗುವ ಫಾರಂ ಪಾಲಿಸಿ ತರುವ ಉದ್ದೇಶವಿರುತ್ತದೆ.

ಉ) ರಾಜ್ಯದ ಯಾವುದೇ ಜಿಲ್ಲೆಯನ್ನು ತೋಟಗಾರಿಕೆ ಜಿಲ್ಲೆ ಎಂದು ಪರಿಗಣಿಸುವ ಪರಿಪಾಠ ಇರುವುದಿಲ್ಲ. ದಕ್ಷಿಣಕನ್ನಡ ಜಿಲ್ಲೆಯಲ್ಲಿ ತೋಟಗಾರಿಕೆಗೆ ಇರುವ ವಿಪೂಲ ಅವಕಾಶಗಳನ್ನು ಮನಗಂಡು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಅಡಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

5602(6523) : ಶ್ರೀ ಡಿ.ಆರ್. ಪಾಟೀಲ್ (ಗದಗ್) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಹಿಳೆಯರ ಸಬಲೀಕರಣಕ್ಕೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ?

ಆ) ಮಹಿಳೆಯರ ಆರ್ಥಿಕ ಸ್ಥಿತಿ ಸುಧಾರಿಸಲು ರಾಜ್ಯದಲ್ಲಿ ಮಹಿಳಾ ಸ್ವಸಹಾಯ ಸಂಘಗಳನ್ನು ಬಲಪಡಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ?

ಇ) ಮಹಿಳೆಯರು ನಡೆಸಬಹುದಾದ ಕುಟೀರ ಕೈಗಾರಿಕೆಗಳನ್ನು ಬೆಳೆಸಲು ಹಾಗೂ ಅವರ ಉತ್ಪಾದನೆಗಳ ಮಾರಾಟಕ್ಕೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳಲಾಗುವುದು?

ಈ) ಪಂಚಾಯಿತಿ ರಾಜ್ಯ ವ್ಯವಸ್ಥೆಯಲ್ಲಿ ಒಂದು ಮೂಲಾಂಶವನ್ನು ಚುನಾಯಿತ ಸ್ಥಾನ ಹಾಗೂ ಅಧಿಕಾರ ಸ್ಥಾನ ಪಡೆದ ಮಹಿಳೆಯರ ಕಾರ್ಯ ಪರಿಣಾಮಕಾರಿಯನ್ನಾಗಿ ಮಾಡಲು ಸರ್ಕಾರ ಚಿಂತನೆ ನಡೆಸಿದೆಯೇ?

ಉ) ನಡೆಸಿದ್ದಲ್ಲಿ ಕೈಗೊಂಡ ಕ್ರಮಗಳಾವುವು?

ಊ) ಮಹಿಳೆಯರ ಸಾಮಾಜಿಕ, ರಾಜಕೀಯ ಸ್ಥಾನಮಾನ ಉತ್ತಮಪಡಿಸಲು ಮಹಿಳಾ ಸಂಘಟನೆಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ? (ವಿವರ ನೀಡುವುದು)

ಋ) ಮಹಿಳೆಯರ ಸಾಕ್ಷರತಾ ಪ್ರಮಾಣ ಎಷ್ಟು ಹಾಗೂ ಅದನ್ನು ಉತ್ತಮಪಡಿಸಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ?

ೠ) ಹೆಣ್ಣು ಮಗುವಿನ ಜನನ ಪ್ರಮಾಣ ಕಡಿಮೆಯಾಗಿದೆಯೇ? ಕಡಿಮೆಯಾಗಿದ್ದಲ್ಲಿ ಈ ಬೆಳವಣಿಗೆ ಪಡೆಯಲು ಸರ್ಕಾರದ ಕ್ರಮಗಳೇನು?

ಶ್ರೀಮತಿ ಭಾಗೀರಥಿ ಮರುಳಸಿದ್ದನಗೌಡ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು):

ಅ) ಮಹಿಳೆಯರ ಸಬಲೀಕರಣಕ್ಕಾಗಿ ಇಲಾಖೆಯು ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ:

1. ಸಾಂತ್ವನ ಯೋಜನೆಯಡಿ ಅತ್ಯಾಚಾರ, ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಪುನರ್ವಸತಿ ಕಲ್ಪಿಸಲಾಗುತ್ತಿದೆ.
2. ಕರ್ನಾಟಕ ಮಹಿಳಾ ಅಭಿವೃದ್ಧಿ ಯೋಜನೆಯಡಿ ರಾಜ್ಯದ 25 ಇಲಾಖೆಗಳು ಅನುಷ್ಠಾನಗೊಳಿಸುತ್ತಿರುವ ಫಲಾನುಭವಿ ಆಧಾರಿತ ಯೋಜನೆಗಳಿಗೆ ಶೇಕಡ 33ರಷ್ಟು ಸಂಪನ್ಮೂಲಗಳನ್ನು ಮಹಿಳೆಯರಿಗಾಗಿ ನಿಗದಿಪಡಿಸುವ ಮೂಲಕ ಮಹಿಳೆಯರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸಲಾಗುವುದು.

3. ಸರ್ಕಾರದ ಇಲಾಖೆಗಳ ನೇರ ನೇಮಕಾತಿಯಲ್ಲಿ ಶೇಕಡ 30ರಷ್ಟು ಹುದ್ದೆಗಳನ್ನು ಮಹಿಳೆಯರಿಗೆ ಮೀಸಲಿಡುವುದು.
4. ವೃತ್ತಿ ತರಬೇತಿ ಪಡೆಯಲು ಮಹಿಳೆಯರಿಗೆ ಆರ್ಥಿಕ ಸಹಾಯ.
5. ಕಾನೂನು ಪದವಿ ಪಡೆದ ಮಹಿಳೆಯರಿಗೆ ಆರ್ಥಿಕ ಸಹಾಯ.
6. ಮಹಿಳೆಯರ ಸಬಲೀಕರಣವನ್ನು ಮುಖ್ಯ ಗುರಿಯನ್ನಾಗಿಟ್ಟುಕೊಂಡು ರಾಜ್ಯದಲ್ಲಿ ಒಂದು ಲಕ್ಷ ಗ್ರಾಮೀಣ ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳನ್ನು ಹಾಗೂ 4912 ನಗರ ಸ್ತ್ರೀಶಕ್ತಿ ಗುಂಪುಗಳ ಮೂಲಕ ಮಹಿಳೆಯರನ್ನು ಸಂಘಟಿಸಲು ಸ್ತ್ರೀಶಕ್ತಿ ಯೋಜನೆಯನ್ನು ಕ್ರಮವಾಗಿ 2000–01 ಹಾಗೂ 2004ರಿಂದ ಅನುಷ್ಠಾನಗೊಳಿಸಲಾಗುತ್ತಿದೆ.

ಆ) ಮಹಿಳೆಯರ ಆರ್ಥಿಕ ಸ್ಥಿತಿ ಸುಧಾರಿಸಲು 15.07 ಲಕ್ಷ ಗ್ರಾಮೀಣ ಮಹಿಳೆಯರನ್ನು ಒಂದು ಲಕ್ಷ ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳ ಮೂಲಕ ಸಂಘಟಿಸಲಾಗಿದೆ ಹಾಗೂ ಅದರಲ್ಲಿ ಉಳಿತಾಯ ಮನೋಭಾವನೆಯನ್ನು ಪ್ರೇರೇಪಿಸಿ ಉಳಿತಾಯದ ಹಣದಲ್ಲಿ ತಮ್ಮ ದಿನನಿತ್ಯದ ಬೇಡಿಕೆಯನ್ನು ಪೂರೈಸಿಕೊಳ್ಳುವುದರೊಂದಿಗೆ ಆದಾಯೋತ್ಪನ್ನ ಚಟುವಟಿಕೆಗಳನ್ನು ಕೈಗೊಂಡು ಅವರ ಆರ್ಥಿಕ ಮಟ್ಟ ಸುಧಾರಿಸಲು ಕ್ರಮ ಕೈಗೊಳ್ಳಲಾಗಿದೆ. ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳನ್ನು ಬಲಪಡಿಸಲು

1. ಪ್ರತಿ ಗುಂಪಿಗೆ ರೂ. 5,000/– ದಂತೆ ಸುತ್ತುನಿಧಿಯನ್ನು ನೀಡಲಾಗಿದೆ.
2. ಪ್ರತಿ ಗುಂಪಿಗೆ ರೂ. 600/– ಮೌಲ್ಯದ ಕಿಟ್ ಸಾಮಗ್ರಿಗಳನ್ನು ಒದಗಿಸಲಾಗಿದೆ.
3. ಗುಂಪಿನ ಸದಸ್ಯರಿಗೆ ದಾಖಲಾತಿ ನಿರ್ವಹಣೆ, ಸಾಲ ನಿರ್ವಹಣೆ ಹಾಗೂ ಸಾಮಾಜಿಕ ವಿಷಯಗಳ ಬಗ್ಗೆ ತರಬೇತಿಯನ್ನು ನೀಡಲಾಗಿದೆ.
4. 58,945 ಗುಂಪುಗಳಿಗೆ ಆದಾಯೋತ್ಪನ್ನ ಚಟುವಟಿಕೆಗಳನ್ನು ಕೈಗೊಳ್ಳಲು ಬ್ಯಾಂಕ್ ಸಾಲ ಸೌಲಭ್ಯ ಒದಗಿಸಲಾಗಿದೆ.

ಇ) ಸ್ತ್ರೀಶಕ್ತಿ ಗುಂಪುಗಳು ಉತ್ಪಾದಿಸುವ 8 ವಸ್ತುಗಳ ಬ್ರಾಂಡ್ ಬಿಡುಗಡೆ ಮಾಡಲಾಗಿದೆ. ಸ್ತ್ರೀಶಕ್ತಿ ಗುಂಪುಗಳು ಉತ್ಪಾದಿಸುವ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸಲು ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ವಸ್ತುಪ್ರದರ್ಶನ ಹಾಗೂ ಮಾರಾಟ ಮೇಳಗಳನ್ನು ನಡೆಸಲಾಗುತ್ತಿದೆ.

ಈ) ಹೌದು.

ಉ) ಗ್ರಾಮ ಪಂಚಾಯಿತಿ ಮಹಿಳಾ ಸದಸ್ಯರಿಗೆ 1994–95 ರಿಂದ 1997–98ರವರೆಗೆ ಇಲಾಖಾ ವತಿಯಿಂದ ತರಬೇತಿ ನೀಡಲಾಗಿದ್ದು ಈ ಅವಧಿಯಲ್ಲಿ ಒಟ್ಟು 24,596 ಮಹಿಳಾ ಸದಸ್ಯರು ತರಬೇತಿ ಹೊಂದಿರುತ್ತಾರೆ. ಈ ತರಬೇತಿಯಲ್ಲಿ ಒಟ್ಟು ರೂ. 122.43 ಲಕ್ಷ ಖರ್ಚಾಗಿರುತ್ತದೆ.

ಊ) ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಪ್ರಕಾರ್ಯಗಳ ನಿರ್ವಹಣೆಯಲ್ಲಿ ರಾಜ್ಯದಲ್ಲಿನ ಸ್ವಯಂ ಸೇವಾ ಸಂಸ್ಥೆಗಳು ಅದರಲ್ಲೂ ಮುಖ್ಯವಾಗಿ ಮಹಿಳಾ ಸಂಸ್ಥೆಗಳೊಂದಿಗೆ

ತೊಡಗಿಸಿಕೊಳ್ಳುವಂತೆ ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧಿನಿಯಮದ ಕಲಂ 9(ಎನ್)ರಲ್ಲಿ ಉಲ್ಲೇಖಿಸಲಾಗಿದ್ದು ಅದರಂತೆ ಮಹಿಳೆಯರ ಸಾಮಾಜಿಕ, ರಾಜಕೀಯ ಸ್ಥಾನಮಾನ ಉತ್ತಮ ಪಡಿಸಲು ಮಹಿಳಾ ಸಂಘಟನೆಗಳಿಗೆ ಆಯೋಗದ ವತಿಯಿಂದ ಕಾರ್ಯಕ್ರಮಗಳನ್ನು ಆಯೋಜಿಸಲು ಅನುದಾನ ನೀಡಲಾಗುತ್ತಿದೆ. (ವಿವರಗಳನ್ನು ಅನುಬಂಧದಲ್ಲಿ ನೀಡಿದೆ)

ಋ) ರಾಜ್ಯದ ಮಹಿಳೆಯರ ಸಾಕ್ಷರತಾ ಪ್ರಮಾಣ 2001ರ ಜನಗಣತಿ ಪ್ರಕಾರ ಶೇಕಡಾ 57.45ರಷ್ಟಾಗಿರುತ್ತದೆ.

ಮಹಿಳಾ ಸಾಕ್ಷರತ ಮಟ್ಟವನ್ನು ಹೆಚ್ಚಿಸುವ ಸಲುವಾಗಿ ಇಲಾಖೆಯು ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ.

1. ಗ್ರಾಮಾಂತರ ಪ್ರದೇಶದ ಹೆಣ್ಣು ಮಕ್ಕಳಿಗೆ ಹಾಜರಾತಿ ಶಿಷ್ಯ ವೇತನ.
2. ಗ್ರಾಮಾಂತರ ಪ್ರದೇಶದ ಹೆಣ್ಣು ಮಕ್ಕಳಿಗೆ ಬಾಲಕಿಯರ ವಸತಿ ನಿಲಯ.
3. ಲೋಕ ಶಿಕ್ಷಣ ನಿರ್ದೇಶನಾಲಯದಿಂದ 8 ಲಕ್ಷ ಅನಕ್ಷರಸ್ಥ ಮಹಿಳೆ ಸದಸ್ಯರು 2005–06ನೇ ಸಾಲಿನಲ್ಲಿ ಓದು ಬರಹ ಕಲಿತು ಸದಸ್ಯರಾಗಲು ಕಲಿಕೆ ಗಳಿಕೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುತ್ತಿದೆ.

ಋಋ) ಹೆಣ್ಣು ಮಗುವಿನ ಜನನ ಪ್ರಮಾಣ ಕಡಿಮೆಯಾಗಿರುವುದು ನಿಜ. ರಾಜ್ಯದಲ್ಲಿ 0–6 ವಯೋಮಾನದ ಹೆಣ್ಣು ಮಕ್ಕಳ ಲಿಂಗಾನುಪಾತ 1990ರಲ್ಲಿ 960 ಇದ್ದು 2001ರ ಜನಗಣತಿಯ ಪ್ರಕಾರ 949ಕ್ಕೆ ಇಳಿದಿರುತ್ತದೆ. ಈ ಬೆಳವಣಿಗೆಯನ್ನು ತಡೆಯಲು ಹೆಣ್ಣು ಮಗುವಿನ ಭ್ರೂಣ ಹತ್ಯೆ ನಿಷೇಧಿಸಲು ಪಿ.ಎನ್.ಡಿ.ಟಿ. ಕಾಯ್ದೆಯನ್ನು ಜಾರಿಗೆ ತರಲಾಗಿದೆ.

ಅಪರ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರನ್ನು ಪಿ.ಎಲ್.ಡಿ.ಟಿ. ಕಾಯ್ದೆ 1994ರ ಸೆಕ್ಷನ್ 17 ಸಬ್ ಸೆಕ್ಷನ್ (2)ರಂತೆ ಅಪ್ರೋಪ್ರಿಯೇಟ್ ಅಥಾರಿಟಿ ಎಂದು ನೇಮಕ ಮಾಡಲಾಗಿದೆ.

ಈ ಕಾಯ್ದೆಯಡಿ ರಾಜ್ಯದ ಅಪ್ರೋಪ್ರಿಯೇಟ್ ಅಥಾರಿಟಿಯು ಕಾಯ್ದೆಯ ಸೆಕ್ಷನ್ 28(1) ಮತ್ತು 30(1) ಮತ್ತು (2)ರಡಿ ಇದೆ. ರಾಜ್ಯದ ವ್ಯಾಪ್ತಿಯಲ್ಲಿ ಪತ್ತೆ ಹಚ್ಚುವ ಹಾಗೂ ದಾಖಲೆಗಳನ್ನು ವಶಪಡಿಸಿಕೊಳ್ಳುವ ಅಧಿಕಾರವನ್ನು ಕಾರ್ಯದರ್ಶಿ, ರಾಜ್ಯ ಮಹಿಳೆ ಆಯೋಗ, ಇವರಿಗೆ ನೀಡಿರುತ್ತದೆ.

ಎಲ್ಲಾ ಜಿಲ್ಲಾ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳಾ ಅಭಿವೃದ್ಧಿ ಇಲಾಖೆ, ಎಲ್ಲಾ ಉಪ ವಿಭಾಗಾಧಿಕಾರಿಗಳು, ಕಂದಾಯ ಇಲಾಖೆ ಹಾಗೂ ಎಲ್ಲಾ ತಾಲ್ಲೂಕು ತಹಸೀಲ್ದಾರ್‌ಗಳಿಗೆ ಈ ಕಾಯ್ದೆಯ ಸೆಕ್ಷನ್ 28(1), 30(1) ಹಾಗೂ (2)ರಡಿ ಅವರವರ ಕ್ಷೇತ್ರ ವ್ಯಾಪ್ತಿಯಲ್ಲಿ ಕ್ರಮ ಕೈಗೊಳ್ಳುವ ಅಧಿಕಾರವನ್ನು ನೀಡಲಾಗಿದೆ.

ಸ್ವಯಂಸೇವಾ ಸಂಸ್ಥೆಗಳ ಮೂಲಕ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಚುಕ್ಕೆ ಗುರ್ತಿಲ್ಲದ ಪ್ರಶ್ನೆ ಸಂ. 6523

ಅನುಬಂಧ-1

ಮಹಿಳಾ ಸಂಸ್ಥೆ / ಸಂಘಟನೆಗಳಿಗೆ 2002-2003, 2003-2004 ಮತ್ತು 2004-2005ನೇ ಸಾಲಿನಲ್ಲಿ ಆಯೋಗದ ವತಿಯಿಂದ ಮಹಿಳೆಯರ ಸಬಲೀಕರಣಕ್ಕಾಗಿ ಕಾರ್ಯಕ್ರಮಗಳನ್ನು ಆಯೋಜಿಸಲು ನೀಡಲಾದ ಅನುದಾನದ ವಿವರಗಳು.

ಕ್ರ. ಸಂ.	ಎನ್.ಜಿ.ಓ. ಹೆಸರು	ವಿವರ	ಆಯೋಗದಿಂದ ನೀಡಲಾದ ಅನುದಾನ (ರೂ.ಗಳಲ್ಲಿ)
1.	ಪ್ರಜ್ಞಾ ಕೌನ್ಸಿಲಿಂಗ್ ಸೆಂಟರ್ ಮಂಗಳೂರು	ವರದಕ್ಷಣೆ ದೌರ್ಜನ್ಯ ಕಾರ್ಯಾಗಾರ	11,584-00
2.	ಪ್ರಜ್ಞಾ ಕೌನ್ಸಿಲಿಂಗ್ ಸೆಂಟರ್ ಗುಲ್ಬರ್ಗಾ	ವರದಕ್ಷಣೆ ಕೌಟುಂಬಿಕ ದೌರ್ಜನ್ಯ ಸಶಕ್ತೀಕರಣ ಕಾರ್ಯಾಗಾರ	11,170-00
3.	ಇಂಡಿಯನ್ ಫೆಡರೇಷನ್ ಆಫ್ ವುಮೇನ್ ಲಾಯರ್ಸ್, ಬೆಂಗಳೂರು.	ಜೆಂಡರ್ ಸೆನ್ಸಿಟೈಸೇಷನ್ ಕಾರ್ಯಾಗಾರ	4,000-00
4.	ಗಿಲ್ಡ್ ಆಫ್ ವುಮೇನ್ ಅಚೀವರ್ಸ್ ಬೆಂಗಳೂರು	ಜೆಂಡರ್ ಸೆನ್ಸಿಟೈಸೇಷನ್ ಕಾರ್ಯಾಗಾರ	9,930-00
	ಒಟ್ಟು		**36,684-00**
		2003-2004	
1.	ವುಮೇನ್ ವಾಯ್ಸ್, ಬೆಂಗಳೂರು	ದಲಿತ ಮತ್ತು ಅಲ್ಪ ಸಂಖ್ಯಾತ ಮಹಿಳಾ ಸಮಾವೇಶ-ಜಾಗೃತಿ ಶಿಬಿರ	25,000-00
2.	ಸ್ಟುಡೆಂಟ್ ಕ್ರಿಶ್ಚಿಯನ್ ಮೂಮೆಂಟ್ ಲಿಮಿಟೆಡ್ ಬೆಂಗಳೂರು	ವರದಕ್ಷಣೆ ಕಿರುಕುಳ ಮತ್ತು ದೌರ್ಜನ್ಯದ ವಿರುದ್ಧ ಚರ್ಚಾ ಸ್ಪರ್ಧೆ	2,500-00
3.	ಜಾಗೃತಿ, ಬೆಂಗಳೂರು	ಕೌಟುಂಬಿಕ ದೌರ್ಜನ್ಯದ ಬಗ್ಗೆ ಕಾರ್ಯಾಗಾರ	4,870-00
	ಒಟ್ಟು		**32,370-00**

2004-2005

1.	ಮಹಿಳಾ ಜಾಗೃತಿ ವೇದಿಕೆ, ಕೋಲಾರ	ಜಾಗೃತಿ ಶಿಬಿರ	5,000-00
2.	ಸೀಡ್ಸ್	ವರದಕ್ಷಣೆ ಅಧ್ಯಯನ ಕಾರ್ಯಗಾರ	1,900-00
3.	ಸ್ಪಂಧನ, ಚೆನ್ನಪಟ್ಟಣ	ಸಾರ್ವಜನಿಕ ಬಹಿರಂಗ ವಿಚಾರಣೆ	25,278-00
4.	ಮಹಿಳಾ ದಕ್ಷತಾ ಸಮಿತಿ ಬೆಂಗಳೂರು	ಸಂಚಿಕೆಯಲ್ಲಿ ಆಯೋಗದ ಕಾರ್ಯ ಚಟುವಟಿಕೆಗಳ ಪ್ರಕಟಣೆ	5,000-00
5.	ಜನತಾ ಬಡಾವಣೆ ಕ್ಷೇಮಾಭಿವೃದ್ಧಿ ಸಂಘ (ರಿ), ಬೆಂಗಳೂರು	ಒಂದು ದಿನದ ಮಹಿಳಾ ಕಾನೂನು ಜಾಗೃತಿ ಶಿಬಿರ	5,000-00
6.	ಎ.ಐ.ಡಿ. ಡಬ್ಲ್ಯೂ.ಎ. ಬೆಂಗಳೂರು	ವರದಕ್ಷಣೆ ಕಿರುಕುಳದ ಬಗ್ಗೆ ಕಾರ್ಯಗಾರ	5,000-00
7.	ಕರಾವಳಿ ಮಹಿಳಾ ಜಾಗೃತಿ ವೇದಿಕೆ, ಬೆಳ್ತಂಗಡಿ, ದ.ಕ. ಜಿಲ್ಲೆ	ಕಾನೂನು ಕಮ್ಮಟ, ಬೆಳ್ತಂಗಡಿ ದಕ್ಷಿಣ ಕನ್ನಡ ಜಿಲ್ಲೆ.	25,000-00
8.	ಮೇ: ವಿಮೋಚನಾ, ಬೆಂಗಳೂರು	ಮಹಿಳಾ ದೌರ್ಜನ್ಯದ ರ್ಯಾಲಿ	15,265-00
9.	ಕೆ.ಜಿ.ಎಫ್. ವುಮೇನ್ ಕೋಲಾರ ಜಿಲ್ಲೆ	ಮೈನಾರಿಟಿ ಮತ್ತು ಎಸ್.ಸಿ/ ಎಸ್.ಟಿ. ಮಹಿಳೆಯರ ಜಾಗೃತಿ ಶಿಬಿರ, ಕೋಲಾರ.	5,000-00
10.	ಸಬೀಲ್ ಇಂಡಿಯಾ, ಬೆಂಗಳೂರು	ಮುಸ್ಲಿಂ ಮಹಿಳೆಯರು ಮತ್ತು ಅವರ ಹಕ್ಕುಗಳ ಜಾಗೃತಿ ಶಿಬಿರ, ಬೆಂಗಳೂರು.	10,000-00
11.	ಕರಾವಳಿ ಮಹಿಳಾ ಜಾಗೃತಿ ವೇದಿಕೆ, ಉಡುಪಿ ಜಿಲ್ಲೆ	ಮಹಿಳೆಯರ ಕಾನೂನು ಕಮ್ಮಟ	25,000-00
	ಒಟ್ಟು		**1,27,443-00**

ಅನುಬಂಧ-2

ಹೆಣ್ಣು ಭ್ರೂಣ ಹತ್ಯೆ ತಡೆಗಟ್ಟುವಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳು:

ಹೆಣ್ಣು ಭ್ರೂಣ ಹತ್ಯೆ ತಡೆಗಟ್ಟಲು, ಗರ್ಭಧಾರಣ ಪೂರ್ವ ಮತ್ತು ಲಿಂಗ ಪತ್ತೆ ತಂತ್ರಜ್ಞಾನ ಕಾಯಿದೆಯನ್ನು, 1994ರಲ್ಲಿ ಕೇಮದ್ರ ಸರ್ಕಾರ ಹೊರಡಿಸಿದ್ದು, 1996ರಲ್ಲಿ ಕಾಯಿದೆ ಅನುಷ್ಠಾನಗೊಂಡಿದೆ. ಸದರಿ ಕಾಯಿದೆಯಲ್ಲಿ ಹೆಣ್ಣು ಭ್ರೂಣ ಹತ್ಯೆ ತಡೆಗಟ್ಟುವಲ್ಲಿ, ಲಿಂಗ ಪತ್ತೆ ತಂತ್ರಜ್ಞಾನದ ಬಳಕೆಯನ್ನು ನಿಯಂತ್ರಿಸುವುದೇ ಮುಖ್ಯ ಉದ್ದೇಶವಾಗಿರುತ್ತದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯ ನಿರ್ದೇಶನ ನೀಡಿದ ಬಳಿಕ ದಿನಾಂಕ: 14-2-2003ರಲ್ಲಿ ಸದರಿ ಕಾಯಿದೆಗೆ ಗರ್ಭಧಾರಣಾ ಪೂರ್ವ ಮತ್ತು ಪ್ರಸವ ಪೂರ್ವ (ಲಿಂಗ ಪತ್ತೆ ತಂತ್ರಜ್ಞಾನ ನಿಯಂತ್ರಣ) ಕಾಯಿದೆ 1994 ಎಂದು ತಿದ್ದುಪಡಿ ತರಲಾಗಿದೆ.

ಈ ಕಾಯಿದೆಗೆ ಸಂಬಂಧಿಸಿದಂತೆ, ಕರ್ನಾಟದಲ್ಲಿ ಈ ಕೆಳಕಂಡ ಮೂರು ಸಕ್ಷಮ ಪ್ರಾಧಿಕಾರಗಳನ್ನು ರಚಿಸಲಾಗಿದೆ.

ಅ) **ರಾಜ್ಯ ಮೇಲ್ಪಿಚಾರಣಾ ಮಂಡಳಿ** : ಮಾನ್ಯ ಮಂತ್ರಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇವರ ಅಧ್ಯಕ್ಷತೆಯಲ್ಲಿ ಈ ಮಂಡಳಿಯನ್ನು ರಚಿಸಲಾಗಿದ್ದು, ಪ್ರಧಾನ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ಒಬ್ಬ ಸದಸ್ಯರಾಗಿರುತ್ತಾರೆ. ರಾಜ್ಯದಲ್ಲಿ ಲಿಂಗ ಆಯ್ಕೆ ನಿಷೇಧ ಕಾಯಿದೆ ಹಾಗೂ ನಿಯಮಗಳ ಅನುಷ್ಠಾನ ಹಾಗೂ ರಾಜ್ ಸಕ್ಷಮ ಪ್ರಾಧಿಕಾರದ ಕಾರ್ಯಚಟುವಟಿಕೆಗಳ ಬಗ್ಗೆ ಮೇಲ್ಪಿಚಾರಣೆ ಮಾಡಲಾಗುತ್ತದೆ.

ಆ) **ರಾಜ್ಯ ಸಕ್ಷಮ ಪ್ರಾಧಿಕಾರ** : ಸದರೀ ಕಾಯಿದೆಯನ್ನು ಅನುಷ್ಠಾನಗೊಳಿಸಲು ರಾಜ್ಯ ಮಟ್ಟದಲ್ಲಿ ರಾಜ್ಯ ಸಕ್ಷಮ ಪ್ರಾಧಿಕಾರವನ್ನು ರಚಿಸಿದ್ದು, ಜಂಟಿನಿರ್ದೇಶಕರು, R.C.H. ಆರೋಗ್ಯ ಇಲಾಖೆ ಅಧ್ಯಕ್ಷರಿರುತ್ತಾರೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಸಕ್ಷಮ ಪ್ರಾಧಿಕಾರಗಳನ್ನು ರಚಿಸಿದ್ದು, ಜಿಲ್ಲಾ ಆರೋಗ್ಯ ಅಧಿಕಾರಿಗಳಿಗೆ ಜಿಲ್ಲಾ ಪ್ರಾಧಿಕಾರದ ಅಧಿಕಾರ ನೀಡಲಾಗಿದೆ. ಕಲಂ 17ರ ಅಡಿಯಲ್ಲಿ ಸದರೀ ಪ್ರಾಧಿಕಾರಗಳಿಗೆ ನೋಂದಣಿಗೆ ಸಂಬಂಧಿಸಿದಂತೆ ಆಸ್ಪತ್ರೆಗಳು, ಪ್ರಯೋಗ ಶಾಲೆ ಅಥವಾ ಕ್ಲಿನಿಕ್‌ಗಳಿಗೆ ಪರವಾನಗಿ ನೀಡಲು, ಅಮಾನತ್ತುಗೊಳಿಸಲು ಅಥವಾ ಪರವಾನಗಿಯನ್ನು ರದ್ದುಪಡಿಸುವ ಅಧಿಕಾರವನ್ನು ನೀಡಲಾಗಿರುತ್ತದೆ.

5603(6524) : ಶ್ರೀ ಪಾಟೀಲ್ ಡಿ.ಆರ್. (ಗದಗ್) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮೀಣ ಪಡಿತರ ವ್ಯವಸ್ಥೆಯಲ್ಲಿ ಕಾನೂನು ಪ್ರಕಾರ ಪಂಚಾಯತಿ ರಾಜ್ಯ ಸಂಸ್ಥೆಗಳಿಗೆ ಇರುವ ಜವಾಬ್ದಾರಿ ಏನು; ಆ ಜವಾಬ್ದಾರಿ ನಿಭಾಯಿಸಲು ಅವರಿಗೆ ಇರುವ ಅಧಿಕಾರವೇನು;

ಆ) ಇದರಲ್ಲಿ ಅವರಿಗೆ ವಹಿಸಿಕೊಟ್ಟಿರುವ ಜವಾಬ್ದಾರಿ ಏನು;

ಇ) ಪ್ರತಿ ತಿಂಗಳು ಸುಮಾರು 70 ಕೋಟಿ ರೂ.ಗಳಷ್ಟು ಸಹಾಯಧನ ಸರಕಾರ ನೀಡುತ್ತಿರುವಾಗ ಇದರ ಲಾಭ ಪ್ರತಿ ಬಡ ಕುಟುಂಬಕ್ಕೆ ಮುಟ್ಟಿಸುವಲ್ಲಿ ಗ್ರಾಮ ಪಂಚಾಯಿತಿಗಳು ಉಪಯುಕ್ತ ಸಂಸ್ಥೆಯಾಗುವುದಿಲ್ಲವೇ?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ಗ್ರಾಮೀಣ ಪಡಿತರ ವ್ಯವಸ್ಥೆಯಲ್ಲಿ ಪಡಿತರ ವಿತರಣೆ ಹಾಗೂ ಗ್ರಾಹಕ ಜಾಗೃತಿ ಮೂಡಿಸುವ ಜವಾಬ್ದಾರಿಯನ್ನು ಗ್ರಾಮ ಪಂಚಾಯಿತಿಗೆ ವಹಿಸಲಾಗುತ್ತಿದೆ. ಗ್ರಾಮ ಮಟ್ಟದಲ್ಲಿ ಪಡಿತರ ವ್ಯವಸ್ಥೆಯ ಮೇಲುಸ್ತುವಾರಿಯನ್ನು ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿಗೆ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆಯನ್ವಯ ನೀಡಲಾಗಿರುತ್ತದೆ.

ಆ) ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಆಹಾರ ಸುರಕ್ಷಾ ಸಮಿತಿ ಎಂಬುದಾಗಿ ರಚಿಸಿ ಗ್ರಾಮೀಣ ಪ್ರದೇಶದ ಆಹಾರ ವಿತರಣೆ ಮೇಲುಸ್ತುವಾರಿ ಸಂಪೂರ್ಣ ಜವಾಬ್ದಾರಿ ನೀಡುವುದು ಸರ್ಕಾರದ ಉದ್ದೇಶವಾಗಿರುತ್ತವೆ.

ಇ) ಹೌದು.